## 16. ಹೀಗೊಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ. ದಾನವಾಡಿ

ಶುದ್ಧ ಗಾಳಿ, ಬೆಳಕು, ಸುಂದರ ಪರಿಸರ ಶಿಕ್ಷಣಕ್ಕೆ ಬೇಕಾದ ವಾತಾವರಣ ಹಾಗೂ ಉತ್ತಮ ಶಿಕ್ಷಕ–ಶಿಕ್ಷಕಿಯರ ಪರಿಶ್ರಮದಿಂದ ಜಿಲ್ಲಾ ಉತ್ತಮ ಶಾಲೆ, ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ, ಉತ್ತಮ ಸ್ಪಂದನೆಯ ಎಸ್.ಡಿ.ಎಂ.ಸಿ ಹೀಗೆ ಹತ್ತು ಹಲವು ಉತ್ತಮಗಳನ್ನು ಒಳಗೊಂಡ ಸರ್ಕಾರಿ ಶಾಲೆಯೊಂದು ನಡೆದು ಬಂದ ದಾರಿ. ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಏನೆಲ್ಲಾ ಆಯಾಮಗಳನ್ನು, ಮಾರ್ಗ ಸೂಚಿಗಳನ್ನು ತನ್ನಲ್ಲಿ ತಾನೆ ಮೈಗೂಡಿಸಿಕೊಂಡು ಶಿಕ್ಷಣಕ್ಕೆ ತನ್ನನ್ನು ತಾನೆ ತೊಡಗಿಸಿಕೊಂಡು ಯಶಸ್ಸಿನ ಹಾದಿಯಲ್ಲಿ ಸಾಗಿದೆ.

ಶಿಕ್ಷಣ, ಕ್ರೀಡೆ, ಸಾಂಸ್ಕೃತಿಕ, ಸಾಮಾಜಿಕ, ಸಾಮುದಾಯಿಕ, ವ್ಯಾವಹಾರಿಕ ಹೀಗೆ ಹಲವು ಕ್ಷೇತ್ರಗಳಲ್ಲಿ ತನ್ನ ಛಾಪು ಮೂಡಿಸಿ ಸದ್ದಿಲ್ಲದೆ ಜಿಲ್ಲೆಯಾದ್ಯಂತ ಸದ್ದು ಮಾಡಿದ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಅಂಚಿನಲ್ಲಿರುವ ಸರ್ಕಾರಿ ಹಿರಿಯ ಪ್ರಾರ್ಥಮಿಕ ಶಾಲೆ ದಾನವಾಡಿ. ಇಲ್ಲಿ ಸಂಘಟಿತ ಶಿಕ್ಷಕರ ತಂಡ, ಸಂಘಟಿತ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ, ಗ್ರಾಮದ ಚುನಾಯಿತ ಪ್ರತಿನಿಧಿಗಳ ಸಹಕಾರ, ಪೋಷಕರ ಪ್ರೋತ್ಸಾಹ ಹೀಗೆ ಹಲವು ರೀತಿಯ ಸಹಕಾರ ಇಲ್ಲಿ ಯಶಸ್ಸಿನ ಗುರಿ ಮುಟ್ಟಲು ದಾರಿಯಾಗಿದೆ.

### 1. ಸುಂದರ ಶಾಲಾ ಉದ್ಯಾನವನ

"Sound mind in a sound body "ಎಂಬ ನಾಣ್ನುಡಿಯಂತೆ ಸುಂದರ ವಾತಾವರಣದಲ್ಲಿ ಸ್ವಚ್ಛ ಪರಿಸರದಲ್ಲಿ ಮಕ್ಕಳ ಮನಸ್ಸು ಹೃದಯ ಅರಳುತ್ತದೆ. ಕಲಿಕೆ ಗುಣಮಟ್ಟದತ್ತ ಸಾಗುತ್ತದೆ. ಸ್ವತಃ ಶಿಕ್ಷಕರೇ ಉದ್ಯಾನವನದ ಸ್ಥಳವನ್ನು ಗಮನದಲ್ಲಿಟ್ಟಕೊಂಡು ಯೋಜನೆ ತಯಾರಿಸಿ ಸಸಿಗಳು, ಗಿಡಗಳು, ಬಳ್ಳಿಗಳನ್ನು ಆಯ್ಕೆಮಾಡಿ ಎಲ್ಲೆಲ್ಲಿ ಯಾವ ಗಿಡ ಬಳ್ಳಿ ನೆಡಬೇಕು ಹಾಗೂ Italian lawn ಎಲ್ಲಿ ಹಾಕಿಸಬೇಕು ಎಂಬುದನ್ನು ಚರ್ಚಿಸಿ, ಚಿಂತಿಸಿ ಬೆಳೆಸಿದ್ದಾರೆ. ಇದಕ್ಕೆ ತಗುಲಿದ ವೆಚ್ಚ ಸುಮಾರು 4 ಲಕ್ಷ ರೂಗಳು. ಈ ವೆಚ್ಚವನ್ನು ಭರಿಸಲು ಶಿಕ್ಷಕರು ತಲಾ ರೂ.5000/– ಗಳಂತೆ ಹಾಗೂ ಸಮುದಾಯ, ದಾನಿಗಳು, ಚುನಾಯಿತ ಪ್ರತಿನಿಧಿಗಳು, ಗ್ರಾಮ ಪಂಚಾಯಿಂದ NREGA Plan ಹೀಗೆ ಎಲ್ಲರ ಶ್ರಮದಿಂದ ತಾಲ್ಲೂಕಿನಲ್ಲಿಯೇ ಸುಂದರವಾದ, ಉತ್ತಮವಾದ ಉದ್ಯಾನವನ ನಿರ್ಮಿಸಲು ಸಾಧ್ಯವಾಗಿದೆ. ಈ ಶಾಲೆಗೆ ಶಿವಮೊಗ್ಗ ಜಿಲ್ಲೆಯ ಮುಖ್ಯ ಕಾರ್ಯ ನಿರ್ವಹಣಧಿಕಾರಿಗಳಾದ ಶ್ರೀ ಕೆ. ರಾಕೇಶ್ ಕುಮಾರ್ IAS ಇವರು ಭೇಟಿನೀಡಿ ಮೆಚ್ಚುಗೆ ವ್ಯಕ್ತಪಡಿಸಿ ಶಿಕ್ಷಕರ ಕಾರ್ಯ ವೈಖರಿಯನ್ನು ಮೆಚ್ಚಿ, ತಾವೇ ದಿನಪತ್ರಿಕೆಯಲ್ಲಿ ಸುದ್ದಿ ಹಾಕಿರುತ್ತಾರೆ.

### 2. *ಶಾಲೆಗೆ ಸುಣ್ಣ ಬಣ್ಣ*

ಈ ಶಾಲೆಗೆ ಶಿವಮೊಗ್ಗ ಜಿಲ್ಲಾ ಪಂಚಾಯತ್ ಕೂಡ್ಲಗೇರೆ ಕ್ಷೇತ್ರದ ಸದಸ್ಯರಾದ ಶ್ರೀಯುತ ಮಣಿಶೇಕರ್, ಇವರ ಕ್ಷೇತ್ರ ಅಭಿವೃದ್ಧಿ ಅನುದಾನದಿಂದ 2 ಲಕ್ಷ ರೂಗಳನ್ನು ನೀಡಿ ಶಾಲೆಗೆ ಉತ್ತಮ ಗುಣಮಟ್ಟದ ಬಣ್ಣವನ್ನು ಹಚ್ಚಿಸಿದ್ದಾರೆ. ಆದ್ದರಿಂದ ಶಾಲೆಯು ಮಕ್ಕಳಿಗೆ ಆಕರ್ಷಣೀಯ ಸ್ಥಳವಾಗಿದೆ.

### 3. ಕ್ರೀಡೆ

ಈ ಶಾಲೆಯ ಮಕ್ಕಳು ಖೋ ಖೋ ಪಂದ್ಯದಲ್ಲಿ ವಲಯ, ತಾಲ್ಲೂಕು, ಜಿಲ್ಲಾ, ವಿಭಾಗಮಟ್ಟ ಹಾಗೂ ರಾಜ್ಯಮಟ್ಟದವರೆವಿಗೂ ಭಾಗವಹಿಸಿದ್ದಾರೆ, ದೈಹಿಕ ಶಿಕ್ಷಕರಿಲ್ಲದ ಈ ಶಾಲೆಯಲ್ಲಿ ಇರುವ ಶಿಕ್ಷಕರೇ ಭೋದನೆಯ ಜೊತೆಗೆ ಕ್ರೀಡೆಗೂ ಸಹ ಪ್ರೋತ್ಸಾಹ ನೀಡಿ ಅದರಲ್ಲಿ ಯಶಸ್ಸು ಕಂಡಿದ್ದಾರೆ. ಈ

ಸಾಧನೆಗಾಗಿ ಸರ್ಕಾರವು ಅಂಕಣ ನಿರ್ಮಿಸಲು ರೂ.1, 20,000/–ಗಳನ್ನು ಖರ್ಚು ಮಾಡಿ ಖೋ ಖೋ ಅಂಕಣ ನಿರ್ಮಿಸಿ ಕೊಟ್ಟಿದೆ.

4. **ಪ್ರತಿಭಾ ಕಾರಂಜಿ ಕಲಿಕೋತ್ಸವ**

ಇಲ್ಲಿಯು ಸಹ ದಾನವಾಡಿ ಶಾಲೆಯದ್ದೆ ಸಿಂಹ ಪಾಲು. ಪ್ರತಿವರ್ಷವು ಪ್ರತಿಭಾಕರಂಜಿ ಹಾಗೂ ಕಲಿಕೋತ್ಸವಗಳಲ್ಲಿ ಭಾಗವಹಿಸುವ ಮಕ್ಕಳು ಎಲ್ಲಾ ವಿಭಾಗಗಳಲ್ಲಿ ಶೇಕಡ 78% ಭಾಗ ಬಹುಮಾನಗಳನ್ನು ತಂದುಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

5. **INSPIRED AWARD**

ಭಾರತ ಸರ್ಕಾರದ ಪ್ರಾಯೋಜಿತ INSPIRED AWARD ಕಾರ್ಯಕ್ರಮದಲ್ಲಿಯೂ ಸಹ ಈ ಶಾಲೆ ಜಿಲ್ಲಾ ಮಟ್ಟದಲ್ಲಿ ಜಯಗಳಿಸಿ ರಾಜ್ಯಮಟ್ಟದಲ್ಲಿ ಭಾಗವಹಿಸಿ ಸಮಾಧಾನಕರ ಬಹುಮಾನ ಗಿಟ್ಟಿಸಿದೆ.

6. **ವಿದ್ಯಾರ್ಥಿ ಬ್ಯಾಂಕ್ –ಜೇನ ಹನಿ**

ಚಿಕ್ಕ ವಯಸ್ಸಿನಿಂದಲೆ ಉಳಿತಾಯ ಯೋಜಯನ್ನು ಅರಿಯಲು ಸಹಾಯವಾಗುವಂತೆ 'ಮಕ್ಕಳ ಬ್ಯಾಂಕ್' ಒಂದನ್ನು ಶಾಲೆಯಲ್ಲಿ ಪ್ರಾರಂಭಿಸಿದ್ದು 1 ರೂಪಾಯಿಂದ 100 ರೂಪಾಯಿವರೆಗೆ ಜಮಾ ಮಾಡಿ 5 ರೂಪಾಯಿಂದ 200 ರೂಪಾಯಿವರೆಗೆ ಹಿಂಪಡೆಯಬಹುದಾದ 'ವಿದ್ಯಾರ್ಥಿ ಬ್ಯಾಂಕ್' ಇದಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಪೆನ್ನು, ಪೆನ್ಸಿಲ್, ನೋಟ್ ಪುಸ್ತಕ, ಬರೆಯುವ ಹಾಳೆಗಳು ಹೀಗೆ ತಮ್ಮ ಚಿಕ್ಕ ಚಿಕ್ಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಇದು ಸಹಕಾರಿಯಾಗಿದೆ. ಇಂದು ಈ ಬ್ಯಾಂಕ್‌ನಲ್ಲಿ ಸುಮಾರು ರೂ.5000/– ರೂಪಾಯಿಗಳಷ್ಟು ಹಣ ಸಂಗ್ರಹವಾಗಿದೆ.

7. **ಶಾಲಾ ದಿನಚರಿ (school diary)**

ಶಿಕ್ಷಕರ ಇಚ್ಚಾ ಶಕ್ತಿಯಿಂದ ಉಚಿತವಾಗಿ ಶಾಲಾ ದಿನಚರಿಗಳನ್ನು ಶಾಲೆಯ ಎಲ್ಲಾ ಮಕ್ಕಳಿಗೆ (1 ರಿಂದ 7ನೇ ತರಗತಿ) ಮುದ್ರಿಸಿ ನೀಡಲಾಗಿದೆ. ಇದರಲ್ಲಿ ರಾಷ್ಟ್ರಗೀತೆ, ನಾಡಗೀತೆ, ರಾಷ್ಟ್ರ ಕವಿಗಳ, ರಜಾದಿನಗಳ ಮಾಹಿತಿ, ಮಗುವಿಗೆ ರಜೆ ಬೇಕಾದಲ್ಲಿ ಕಾರಣ ನೀಡಲು ಸ್ಥಳ, ಶಾಲಾ ಶೈಕ್ಷಣಿಕ ಸಮಯ ಹಾಗೂ ದಿನಗಳ ವಿವರ, ವಿಶೇಷ ತರಗತಿಗಳು, ಕಿರು ಪರೀಕ್ಷೆ ಹೀಗೆ ಹಲವು ಮಾಹಿತಿಗಳನ್ನುಳ್ಳ ದಿನಚರಿಯನ್ನು ಮಕ್ಕಳಿಗೆ ನೀಡಲಾಗಿದೆ.

8. **ಶುದ್ಧ ಕುಡಿಯುವ ನೀರು**

ಜಿಲ್ಲಾ ವಿರಶೈವ ಯುವ ವೇದಿಕೆ ಶಿವಮೊಗ್ಗ ಇವರ ವತಿಯಿಂದ ರೂ.10,000/– ಗಳ Aqua guard ನ್ನು ದಾನವಾಗಿ ಪಡೆದು ಮಕ್ಕಳಿಗೆ ಶುದ್ಧ ಕುಡಿಯುವ ನೀರು ಪೂರೈಸಲಾಗುತ್ತಿದೆ. ಆರೋಗ್ಯವಂತ ಮಕ್ಕಳು ರಾಷ್ಟ್ರದ ಸಂಪತ್ತು ಎಂಬುದು ಇಲ್ಲಿ ಯಶಸ್ವಿಯಾಗಿದೆ.

9. **ಪ್ರತಿಭಾ ಪುರಸ್ಕಾರ**

ಇದೆ ದಾನವಾಡಿ ಶಾಲೆಯಲ್ಲಿ ಓದಿದಂತಹ ಡಾ!! ಡಿ .ಸಿ. ಕಾಂತರಾಜ್ M.sc, Ms, Phd, ಪದವಿಗಳನ್ನು ಪಡೆದು ದಕ್ಷಿಣ ಅಮೇರಿಕಾರದಲ್ಲಿ ಹಿರಿಯ ಭೂ ವಿಜ್ಞಾನಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಇವರು ಶಾಲೆಯ ಪ್ರತಿಯೊಂದು ತರಗತಿ (1 ರಿಂದ 7) ಯಲ್ಲಿ ಉತ್ತಮ ಅಂಕಗಳಿಸಿದ ಒಬ್ಬ ವಿದ್ಯಾರ್ಥಿಗೆ ರೂ.1000/–ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡುತ್ತಾ

ಬಂದಿದ್ದಾರೆ ಇದಕ್ಕಾಗಿ ಅವರು ರೂ.1,00,000/– ಗಳ ಮುದುವಟ್ಟನ್ನು ಇಟ್ಟಿರುತ್ತಾರೆ ಹಾಗೂ ಶಾಲೆಗಾಗಿ ರೂ.25,000/–ಗಳ ಕಂಪ್ಯೂಟರ್, ಪ್ರಿಂಟರ್ ಕೊಡುಗೆಯಾಗಿ ನೀಡಿರುತ್ತಾರೆ.

### 10. Smart Class

ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯಾದಂತೆ ಸರಕಾರಿ ಶಾಲೆಗಳು, ಖಾಸಗಿ ಶಾಲೆಗಳಿಗೆ ಸೆಡ್ಡು ಹೊಡೆಯುವಂತೆ ಬದಲಾಗದಿದ್ದಲ್ಲಿ, ಉಳಿಗಾಲವಿಲ್ಲ ಎಂಬುದನ್ನು ಮನಗಂಡು ದಾನವಾಡಿ ಶಾಲೆಯಲ್ಲಿ ಓದಿ ಇಂಜಿನಿಯರ್ ಆಗಿ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಜಿ.ಈ. ಗಿರೀಶ್ ಇವರೊಂದಿಗೆ ಚರ್ಚಿಸಿ ದಾನವಾಗಿ Smart class ಗೆ ಬೇಕಾದ ರೂ.36,000/–ಗಳ projector ನ್ನು ಪಡೆದು ಇಲಾಖೆಯ ಶೈಕ್ಷಣಿಕ ಪಾಠಗಳನ್ನು ಪ್ರದರ್ಶಿಸಲಾಗುತ್ತಿದೆ.

### 11. ಹಸಿರು ಶಾಲಾ ಪ್ರಶಸ್ತಿ

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರು, ಜ್ಞಾನ ಸಾಗರ ನಾವೆ ಟ್ರಸ್ಟ ಶಿವಮೊಗ್ಗ ಇವರು ಪ್ರತಿ ವರ್ಷ ನೀಡುವ ಪರಿಸರ ಮಿತ್ರ ಶಾಲೆ, ಹಸಿರು ಶಾಲೆ ಪ್ರಶಸ್ತಿಗೆ 2016–2017 ನೇ ಸಾಲಿನಲ್ಲಿ ಆಯ್ಕೆಯಾಗಿ ಜಿಲ್ಲೆಯ ಉತ್ತಮ "ಹಸಿರು ಶಾಲೆ" ಪ್ರಶಸ್ತಿ ಗಳಿಸಿದೆ. ಪ್ರಶಸ್ತಿ ಪತ್ರದೊಂದಿಗೆ ರೂ.6,000/–ಗಳ ನಗದು ಬಹುಮಾನ ಪಡೆದಿದೆ. ಶಾಲೆಯಲ್ಲಿ ಎರಡು ತೊಟ್ಟಿಗಳನ್ನು ನಿರ್ಮಿಸಿ, ಅದರಲ್ಲಿ ಒಂದು ಮಿತ್ರ ಕಸ, ಮತ್ತೊಂದು ಶತ್ರು ಕಸ ಎಂದು ನಿರ್ಮಿಸಿ ಅದರಲ್ಲಿ ಕೊಳೆಯುವ ಮತ್ತು ಕೊಳೆಯದ ಕಸ ಬೇರ್ಪಡಿಸಿ ಪ್ಲಾಸ್ಟಿಕ್ ಮುಕ್ತ ವಾತಾವರಣ ನಿರ್ಮಿಸಲಾಗಿದೆ.

### 12. ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ

ಇಷ್ಟೆಲ್ಲಾ ಆಯಾಮಗಳನ್ನು ಹೊಂದಿ ಶೈಕ್ಷಣಿಕ ಕ್ಷೇತ್ರದಲ್ಲಿ ಗುರುತಿಸಿ ಕೊಂಡಿರುವ ಶಿಕ್ಷಕರ ತಂಡವನ್ನು ಹೊಂದಿರುವ ಶಾಲೆಯು, ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಡ್ತಿ ಮುಖ್ಯ ಶಿಕ್ಷಕರಾದ ಶ್ರೀ ಲೋಕೇಶ್ ಎಸ್.ಎಚ್ MA, Bed, ಇವರಿಗೆ 2017–18 ನೇ ಸಾಲಿನ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿದ್ದು ಮಾಡಿದ ಕೆಲಸಕ್ಕೆ ಹಿಡಿದ ಕೈಗನ್ನಡಿಯಂತಿದೆ.

### 13. ಓದುವ ಕುಟೀರ

ಮಕ್ಕಳು ಹೊರಗಿನ ವಾತಾವರಣದಲ್ಲಿ ಓದಲು ಮತ್ತು ಸಾಮಾನ್ಯ ಜ್ಞಾನ ತಿಳಿಯಲು ಅನುಕೂಲವಾಗುವಂತೆ ಆವರಣದಲ್ಲಿ ಒಂದು ಕುಟೀರವನ್ನು ನಿರ್ಮಿಸಿ ಅದರಲ್ಲಿ ಮಕ್ಕಳು ಕೂರಲು ಆಸನ ವ್ಯವಸ್ಥೆ, ಸಾಮಾನ್ಯ ಜ್ಞಾನದ ಚಾರ್ಟ್‌ಗಳನ್ನು ಹಾಕಲಾಗಿದೆ. ಇದನ್ನು ಪರಿಸರ ಮಿತ್ರ ವಸ್ತುಗಳಿಂದ ರಚಿಸಲಾಗಿದೆ.

### 14. ಮಕ್ಕಳ ಕಲಿಕೆ

ಕೇವಲ ಸೌಂದರ್ಯಕ್ಕೆ ಮಾತ್ರ ಗಮನ ನೀಡದೆ ಮಕ್ಕಳ ಕಲಿಕೆಗೂ ಆಧ್ಯತೆ ನೀಡಲಾಗಿದೆ. ನಲಿ ಕಲಿ ತರಗತಿಗೆ ಟೇಬಲ್ ವ್ಯವಸ್ಥೆ ಮಾಡಿ, ವಿಶೇಷವಾಗಿ ವಾಲ್‌ಸ್ಲೇಟ್ ನಿರ್ಮಿಸಲಾಗಿದೆ. ಒಂದನೇ ತರಗತಿಯ ಮಕ್ಕಳೂ ಕೂಡ 20 ರವರೆಗಿನ ಮಗ್ಗಿ ಹೇಳುತ್ತಾರೆ. ಎಲ್ಲಾ ಮಕ್ಕಳೂ ಉತ್ತಮವಾಗಿ ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಬಗ್ಗೆ ರಾಜ್ಯ ಯೋಜನಾ ಕಛೇರಿಯ ಕಿ.ಕಾ.ಅಧಿಕಾರಿಯವರಾದ ಶ್ರೀಮತಿ ಗುಣವತಿ ಮಕ್ಕಳ ಕಲಿಕೆ ಕಂಡು ಮೆಚ್ಚುಗೆ ವ್ಯಕ್ತ ಪಡಿಸಿರುತ್ತಾರೆ.














b c d e f g h i j k l m n o p q r s t u v w x y z
b c d e f g h i j k l m n o p q r s t u v w x y z





